ಇ) ಈ ಯೋಜನೆಯ ಅಂದಾಜು ವೆಚ್ಚದ ಹಾಗೂ ಒದಗಿಸಲಾದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಚೌಡರೆಡ್ಡಿ. (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಪ್ರಸ್ತಾವನೆ ಕರ್ನಾಟಕ ಜಲ ಮಂಡಳಿಯಿಂದ ಬಂದಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯ ಅಂದಾಜು ವೆಚ್ಚವು ೫೧೦ ಲಕ್ಷ ರೂ.ಗಳು ಈ ಅಂದಾಜಿನ ಹಣಕಾಸಿನ ವ್ಯವಸ್ಥೆಯು ಈ ಕೆಳಕಂಡಂತಿದೆ.

1.	ಹುಡ್ಕೋ ಸಾಲ	ಶೇ. 50	255 ಲಕ್ಷ ರೂ.
2.	ಸರ್ಕಾರದ ಸಾಲ	ಶೇ. 25	127.5 ಲಕ್ಷ ರೂ
3.	ನಗರ ಸಭೆಯ ವಂತಿಗೆ	ಶೇ. 25	127.5 ಲಕ್ಷ ರೂ.
		ಒಟ್ಟು :	**5100.0 ಲಕ್ಷ ರೂ.**

ರಾಜ್ಯದಾದ್ಯಂತ ಏಕರೂಪದ ನೀರು ಪೂರೈಕೆ ದರ ನಿಗದಿ.

202 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಾದ್ಯಂತ ಎಲ್ಲಾ ನಗರಗಳಿಗೆ ಏಕರೂಪದ ನೀರು ಪೂರೈಕೆ ದರ ನಿಗದಿಗೊಳಿಸಲು ಧಾರವಾಡ-ಕಾರವಾರ ಜಿಲ್ಲಾ ಶಾಸಕರ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೀಡಿದ ಭರವಸೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಈ ಭರವಸೆ ಈಡೇರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

1) ಹೌದು

2) ಏಕರೂಪದ ನೀರು ಪೂರೈಕೆ ದರಗಳನ್ನು ನಿಗಧಿಪಡಿಸಲು ಬೇಕಾಗುವ ಮಾಹಿತಿಗಳನ್ನು ಸಂಬಂಧಪಟ್ಟ ನಗರಪಾಲಿಕೆ: ನಗರ ಸಭೆ ಹಾಗೂ ಪುರಸಭೆಯವರಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸಂಗ್ರಹಿಸುತ್ತಿದೆ. ಈ ಬಗ್ಗೆ ಪರಿಶೀಲಿಸಿ ಶೀಘ್ರದಲ್ಲಿಯೇ ಈ ದರಗಳನ್ನು ಪೂರ್ಣಗೊಳಿಸಲಾಗುವುದು.

ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಸಲಾದ ಮನೆಗಳ ಸಂಖ್ಯೆ.

203 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಸಲಾದ ಒಟ್ಟು ಮನೆಗಳು ಎಷ್ಟು? (ವಿಧಾನ ಸಭಾ ಮತ ಕ್ಷೇತ್ರವಾರು ವಿವರ ನೀಡುವುದು).

ಆ) ಪ್ರತಿ ಮತ ಕ್ಷೇತ್ರದಲ್ಲಿ ಕನಿಷ್ಟ 500 ಮನೆ ಕಟ್ಟಲು ಬೇಕಾಗುವ ಹಣ ಎಷ್ಟು?

ಇ) ಈ ಯೋಜನೆಗೆ ಒದಗಿಸಲಾಗಿರುವ ಹಣ ಎಷ್ಟು ಹಾಗೂ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ) 7048.

ವಿವರ ಅನುಬಂಧ 'ಅ' ಲಗತ್ತಿಸಿದೆ.

ಆ) ರೂ. 160.50 ಕೋಟಿಗಳು.

ಇ) **ಆಯವ್ಯಯದಲ್ಲಿ ಒದಗಿಸಿದ ಹಣ :**

1)	1991-92	ಇಲ್ಲ.	
2)	1992-93	ಸಹಾಯಧನ	49.50 ಕೋಟಿ
3)	1993-94	ಸಹಾಯಧನ	48.50 ಕೋಟಿ
4)	1993-94	ಸಾಲ	93.05 ಕೋಟಿ.

ಬಿಡುಗಡೆ ಮಾಡಿದ ಹಣ :

1) ಗೃಹ ಮಂಡಲಿ.

(ಸಹಾಯ	1991-92	15,00 ಕೋಟಿ
ಧನ)	1992-93	15.00 ಕೋಟಿ
(ಸಾಲ)	1992-93	13.00 ಕೋಟಿ
	1993-94	-
		ಒಟ್ಟು 43.00 ಕೋಟಿ
		ಕಡಿತ 4.40 ಕೋಟಿ

(ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿರುವ 13.20 ಕೋಟಿಯಲ್ಲಿ ಸೇರಿದೆ) 38.60 ಕೋಟಿ.

2) ಜಿಲ್ಲಾಧಿಕಾರಿಗಳಿಗೆ

1992-93	13.20 ಕೋಟಿ.
1993-94	20.67 ಕೋಟಿ.
	ಒಟ್ಟು 33.87 ಕೋಟಿ.

ಇದುವರೆಗೂ ಬಿಡುಗಡೆಯಾಗಿರುವ ಒಟ್ಟು ಮೊತ್ತ **72.47 ಕೋಟಿ.**

ನಿಪ್ಪಾಣಿ ನಗರದಲ್ಲಿ ಹುಡ್ಕೋಸ್ಕೀಂನಲ್ಲಿ ಕಟ್ಟಿರುವ ಮನೆಗಳ ಬಗ್ಗೆ.

502 - ಶ್ರೀ ಸುಭಾಷ್ ಜೋಷಿ, (ನಿಪ್ಪಾಣಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಪ್ಪಾಣಿ ನಗರದಲ್ಲಿ ಹುಡ್ಕೋ ಸ್ಕೀಂನಲ್ಲಿ ಕಟ್ಟಿರುವ ಮನೆಗಳೆಷ್ಟು?

ಆ) ಸಾರ್ವಜನಿಕರಿಗಾಗಿ ಹಂಚಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಈ ಮನೆಗಳ ಹಂಚಿಕೆಯಲ್ಲಿ ಅವ್ಯವಹಾರಗಳು ಏನಾದರೂ ನಡೆದಿವೆಯೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) 121.

ಆ) 121.

ಇ) ಇಲ್ಲ.

ಅಂಗಡಿ ಮತ್ತು ಮಳಿಗೆ ಲೈಸನ್ಸುಗಳನ್ನು 5 ವರ್ಷಗಳಿಗೆ ಒಮ್ಮೆ ನವೀಕರಣ.

477 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂಗಡಿಗಳು ಮತ್ತು ಮಳಿಗೆ ಕಾನೂನಿನನ್ವಯ ಎಷ್ಟು ಅಂಗಡಿಗಳು ಹಾಗೂ ಮಳಿಗೆಗಳನ್ನು ದಾಖಲಾತಿ ಮಾಡಿಕೊಳ್ಳಲಾಗಿದೆ;